Reg No M. 1229 Srl 29—2—1956

೩೯ನೇ ವರ್ಷ - 39 th Year

ಸತ್ಯವಾದಿ

SATYAVADI

ಬಿಡಿ ಪ್ರತಿ 3 ಪೈ] ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ರಾಯರ್ಯ

ಸಾದರ ಸ್ವೀಕಾರ

ನಗೆ ನಾಣ್ಯ ಸಂಗ್ರಹಕಾರರು : ಎಚ್ ಆರ್ ನಾಗೇಶರಾವ್ ಬೆಲೆ 6 ಆಣೆ ಚಾತಕ ಪ್ರಕಾಶನ, 42 ಜರ್ನಲಿಸ್ಟ್ ಕಾಲೊನಿ, ಶ್ರೀ ಜಯಚಾಮರಾಜೇಂದ್ರ ರಸ್ತೆ ಬೆಂಗಳೂರು 2

ನಗೆ ಗಡಲಿನಲ್ಲಿ ವಿಹಾಯುತ್ತಿರಲು ಯಾರು ಬಯಸುವುದಿಲ್ಲ ? 95 ಪುಟಗಳುಳ್ಳ ಈ ಸಣ್ಣ ಪುಸ್ತಕದಲ್ಲಿ ನಗೆ ಗಡಲಿನ ಅನೇಕ ಅಲೆಗಳನ್ನು ಕಾಣಬಹುದು ಬೇಜಾರನ್ನು ಕಳೆಯಲು, ಮನಸ್ಸಿಗೆ ಉಲ್ಲಾಸ ಆನಂದಗಳನ್ನು ಪ್ರಸಾದಿಸಲು ಮನೆಮಕ್ಕಳೊಂದಿಗೆಯೂ, ಸ್ನೇಹಿತರೊಂದಿಗೆಯೂ ಇರುವಾಗ ಅವರನ್ನು ಎಲ್ಲಾ ಚಿಂತೆಗಳಿಂದ ದೂರಗೊಳಿಸಿ ಉತ್ಸಾಹಗೊಳಿಸಲು ಈ ಪುಟ್ಟ ಪುಸ್ತಕದಲ್ಲಿಯ ಹಾಸ್ಯಲಹರಿಗಳು ಬಹಳ ಉಪಯೋಗವಾಗಿರುತ್ತವೆ ಆನಂದದೊಂದಿಗೆ ಜೀವಮಾನವನ್ನು ಕಳೆಯಲಪೇಕ್ಷಿಸುವವರು ಈ ಪುಸ್ತಕವನ್ನು ಆಗಿಂದಾಗ್ಗೆ ಓದುತ್ತಿರಬೇಕಾದದ್ದು ಅತ್ಯವಶ್ಯಕವು ; ಇಂಥಾ ಹರ್ಷದಾಯಕ ವಿಷಯಗಳನ್ನು ಪಂಗಡಿಸಿ ಓದುಗರನ್ನು ಆನಂದಸಾಗರದಲ್ಲಿ ಓಲಾಡುತ್ತಿರುವಂತೆ ಮಾಡಬೇಕೆಂಬ ಉದ್ದೇಶದಿಂದ ಪುಸ್ತಕರೂಪದಲ್ಲಿ ಅಚ್ಚುಹಾಕಿಸಿರುವ ಸಂಗ್ರಹಕಾರರು ಕನ್ನಡ ನಾಡಿಗೆ ಮಾಡಿರುವ ಸೇವೆ ಪ್ರಶಂಸನೀಯವೇ ಸರಿ

ಮದರಾಸು ಫೆ 27— ಮದರಾಸಿನ ಬಡ್ಜೆಟ್ 3.1 ಕೋಟಿ ರೂಗಳ ಖೋತವಾಗಿದೆ : ಪ್ರಜೆಗಳ ಮೇಲೆ ಹೊಸ ತೆರಿಗೆ ಬೀಳುತ್ತೆ; ಸಕ್ಕರೆ ಮೇಲೆ ಮೂರಾಟ ಕರ ಹೆಚ್ಚಿಸಲಾಗುತ್ತೆ.

ನಾಳೆಯ ಪಂಚಾಂಗ

ಅ॥ ಮಹಾವಿದ್ವಾನ್ ದೈವಜ್ಞಶಿಖಾಮಣಿ ಸಂಪಕ್ಕೃಷ್ಣಜೋಯಿಸರಿಂದ

ಮಾರ್ಚಿ 1 ಗುರುವಾರ ಪಂಚಮಿ ಸ್ವಾತಿ

ಪೌರಸಭೆ

ಮೈಸೂರು 28 — ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಈ ದಿನ ಸಂಜೆ ಮೈಸೂರು ಪೌರಸಭೆಯ ಮುಂದುವರಿದ ತಿಂಗಳ ಸಭೆ ಸೇರಿದ್ದಿತು

ಆಯುರ್ವೇದ ಕಾಲೇಜು ಬೆಂಗಳೂರಿಗೆ ವರ್ಗವಾಗಬೇಕೆಂದು ಸರ್ಕಾರ ಮಾಡಿರುವ ನಿರ್ಧಾರವನ್ನು ಸರ್ಕಾರ ಬದಲಾಯಿಸಬೇಕೆಂದು ಕೋರುವ ನಿರ್ಣಯವನ್ನು ಮಂಡಿಸುವಂತಾಗಿ ಶ್ರೀ ಬಿ ಕೆ ರಾಮಕೃಷ್ಣಯ್ಯನವರು ತಿಳಿಸಿದರು ಈ ಮುಖ್ಯ ವಿಷಯವನ್ನು ವಿಶೇಷ ಸಭೆಯಲ್ಲಿ ಪರಿಶೀಲಿಸೋಣ ಎಂದು ಅಧ್ಯಕ್ಷರು ತಿಳಿಸಿದರು.

ಡಾ॥ ಬಿ. ಜೆ. ದಾಸರು, ಸರ್ಕಾರಿ ಬಸ್ಸಿಗೆ ಸಿಕ್ಕಿಕೊಂಡು ಸತ್ತ ಹುಡುಗಿ ಬಗ್ಗೆ ರಿಜಿಸ್ಟರಿನಲ್ಲಿ ಏನು ದಾಖಲಾಗಿದೆ ಎಂದು ಕೇಳಲು ನೋಟೀಸ್ ಎಂದು ಉತ್ತರಬಂತು ರಿಜಿಸ್ಟರಿನಲ್ಲಿ ಮರಣದ ವಿಷಯವನ್ನು ದಾಖಲು ಮಾಡುವಂತೆ ಡಾ॥ ಬಿ. ಜೆ. ದಾಸ್‌ರವರು ತಿಳಿಸಿದರು ಡಾ॥ ದಾಸ್‌ರವರು ಮಾತನಾಡುತ್ತಾ : ಶಾಲೆಗಳಲ್ಲಿ ಮಕ್ಕಳಿಗೆ ಸಂಚಾರ ಬಗ್ಗೆ ಶಿಕ್ಷಣ ಕೊಡಬೇಕು ಈ ಬಗ್ಗೆ ವಿದ್ಯಾಧಿಕಾರಿಯವರಿಗೆ ಸೂಚಿಸಬೇಕು ಎಂದು ತಿಳಿಸಿದರು.

ಕಾಂಗ್ರೆಸಿಗೆ ಬಹುಮತವಿಲ್ಲ

ಹುಣಸೂರಿನಲ್ಲಿ ನಡೆದ ಪೌರಸಭೆ ಚುನಾವಣೆಯಲ್ಲಿ 20 ಸ್ಥಾನಗಳ ಪೈಕಿ ಕಾಂಗ್ರೆಸಿಗೆ 8 ಸ್ಥಾನಗಳು ಸಿಕ್ಕಿವೆ

ನೇಟಾಲಿನಲ್ಲಿರುವ 350000 ಭಾರತೀಯರು ಇನ್ನು ಹತ್ತು ವರ್ಷಗಳಲ್ಲಿ ನಿರುದ್ಯೋಗಿಗಳಾಗಬೇಕಾಗುತ್ತದೆಂದು ನೇಟಾಲ್ ಡೇಲೀ ನ್ಯೂಸ್ ಬೆದರಿಕೆಹಾಕಿತೆ.

ಬೊಂಬಾಯಿ ಫೆ 27— ಚಿನ್ನದ ಬೆಲೆಯು ತೊಲಾಕ್ಕೆ 100 ರೂಗಳನ್ನು ದಾಟಿದೆ.

ಡಾ. ಮೋದಿಯವರ ನೇತ್ರ ಶಿಬಿರಕ್ಕೆ ಪ್ರಭುಗಳ ಭೇಟಿ

ದಿವ್ಯವಾಣಿ

ಮುಂದೆ ದೃಷ್ಟಿ ಇಲ್ಲ ; ಅದಿಲ್ಲದಿದ್ದಲ್ಲಿ ಹಿಂದಕ್ಕೆ ಬಿದ್ದಹೋಗುವಿರಿ.

ಇಂಡಿಯನ್ ಮಿಲ್ಟಿಪರ್ಪಸ್ ಫುಡ್

ಮೈಸೂರು— ಸೆಂಟ್ರಲ್ ಫುಡ್ ಟೆಕ್ನಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನವರು ಪುಷ್ಟಿದಾಯಕವಾದ ಮತ್ತು ಅತಿ ಕಡಮೆ ಬೆಲೆಯ ದೇಶೀಯ ಪದಾರ್ಥಗಳಿಂದ ತಯಾರಿಸಲ್ಪಡುವ 'ಇಂಡಿಯನ್ ಮಿಲ್ಟಿಪರ್ಪಸ್ ಫುಡ್' ಕ್ಕಿಪ್ಪದಲ್ಲಿಯೇ ಹೆಡ್ಡಿ ತಯಾರಿಸಿ ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಿರುವರು — ಈ ಆಹಾರದಿಂದ ತಯಾರಿಸಿದ ಬಿಸ್ಕತ್ ಟಾಫಿ ರುಚಿಕರವಾದ ವಿವಧ ತಿಂಡಿ ತಿನಿಸುಗಳು ರಾಷ್ಟ್ರಪತಿ ಭವನದಲ್ಲಿ 14 ನೇ ತಾರೀಖಿನಂದು ಪ್ರದರ್ಶಿಸಿದಾಗ ತುಂಬಾ ಕುತೂಹಲವನ್ನುಂಟುಮಾಡಿತು : ಇದರ ಅಗ್ಗ, ಪೌಷ್ಟಿಕ ಗುಣ ಮುಂತಾದವು ಎಲ್ಲಾ ಕೇಂದ್ರ ಮಂತ್ರಿಗಳ, ಮುಖ್ಯವಾಗಿ ಪ್ರಧಾನಿಗಳ ಮೇಲೆ ತುಂಬಾ ಪರಿಣಾಮಕಾರಿಯಾಗಿ ಕಂಡ ಬಂದಿತಲ್ಲದೆ, ಇದು ಸಾರ್ವಜನಿಕರಿಗೆ ಅದಷ್ಟು ಬೇಗ ದೊರೆಯಬೇಕೆಂದು ಇಚ್ಛಿಸಿದರು

ಹೌಂಡು ತೂಕದ ಮೊಟ್ಟೆ

ನ್ಯೆಕಲ್ಯಾಂಡ್ (ನೂ. ಜೆರ್ಸಿ) 26— ಮಾರ್ಟಿ ನೊಲ್ಡೊವನ್ನನ ಫಾರಂನಲ್ಲಿ ಒಂದು ಕೋಳಿಯು 1 ಪೌಂಡ್ ತೂಕದ ಮೊಟ್ಟೆ ಹಾಕಿದೆ

× ಇರ್ವಿನ್ ರಾಜಾ ವತ್ತು ರಾಣಿ ಬೆಂಗಳೂರಿನಿಂದ ನಾಳೆ ಮಧ್ಯಾಹ್ನ ಮೈಸೂರಿಗೆ ಆಗಮಿಸಲಿದ್ದಾರೆ

× ಮೈಸೂರು ವಿಧಾನಸಭೆ ನಿನ್ನೆ ಬೆಂಗಳೂರಿನಲ್ಲಿ ಆರಂಭವಾಗುವ ಮೊದಲು ಸದಸ್ಯರ ಸ್ಥಾನದ ಮುಂದೆ ಶ್ರೀ ವೆಂಕಟರಮಣಸ್ವಾಮಿಯವರ ಚಿತ್ರ ಮತ್ತು ಪ್ರಸಾದವನ್ನು ಶ್ರೀ ಪಿ ಆರ್ ನಾಯ್ಡು ಇಟ್ಟಿದ್ದರು

× ಒಂದೂಮುಕ್ಕಾಲು ಕೋಟಿ ರೂಗಳನ್ನು ಕೇಂದ್ರ ಕೊಟ್ಟರೆ ಮೈಸೂರಿನಲ್ಲಿ ಪೂರ್ಣ ಪ್ರಾಣಪ್ರತಿಷ್ಠಾಪಿಸಿದ ಜಾಗಕ್ಕೆ ತರಲಾಗುವುದು

× ಬಂಗಾಳ-ಬಿಹಾರ ವಿಲೀನ ವಿರೋಧ ಚಳವಳಿಯಲ್ಲಿ 58 ಜನ ಬಂಧಿತರಾಗಿದ್ದಾರೆ

ನೇತ್ರದಾನಿ ಡಾ || ಮೋದಿಯವರು ದಸರಾ ವಸ್ತುಪ್ರದರ್ಶನಾಲಯದಲ್ಲಿ ಆರಂಭಿಸಿರುವ ನೇತ್ರಶಸ್ತ್ರಚಿಕಿತ್ಸಾ ಶಿಬಿರಕ್ಕೆ ಶ್ರೀಮನ್ಮಹಾರಾಜರು ಇಂದು ಬೆಳಿಗ್ಗೆ ಭೇಟಿಕೊಟ್ಟು, ಡಾ || ಮೋದಿಯವರು ನಡೆಸುತ್ತಿದ್ದ ವಿಶೇಷ ರೀತಿಯ ಶಸ್ತ್ರಚಿಕಿತ್ಸೆಗಳನ್ನು ಅಪಕ್ಕಿಯಿಂದ ವೀಕ್ಷಿಸಿದರು : ನಂತರ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ರೋಗಿಗಳ ಬಿಡಾರಕ್ಕೆ ತೆರಳಿ ಎಲ್ಲರನ್ನೂ ನೋಡಿದರು ; ಡಾ॥ ಮೋದಿಯವರು ಶ್ರೀಮನ್ಮಹಾರಾಜರಿಗೆ ಎಲ್ಲ ವಿವರಗಳನ್ನೂ ತಿಳಿಸಿದರು.

ಡಾ॥ ಮೋದಿಯವರು ಇಂದು ಶಸ್ತ್ರ ಸಮಕ್ಷಮ ನಡೆಸಿದ, ಮಾಲುಗಣ್ಣು ಸರಿಪಡಿಸುವಿಕೆ, ಪ್ಲಾಸ್ಟಿಕ್ ಲೆನ್ಸ್ ಇಂಪ್ಲಾಂಟ್, ಕಣ್ಣಿನ ಪೊರೆ, ಕೆಟ್ಟ ಗುಡ್ಡೆ ತೆಗೆಯುವ ಶಸ್ತ್ರಚಿಕಿತ್ಸೆಯನ್ನು ಮಹಾರಾಜರು ಅಶ್ಚರ್ಯಪಟ್ಟು, ನೀವು ನಡೆಸುತ್ತಿರುವ ಈ ಪವಿತ್ರ ಕಾರ್ಯ ಸುಗಮವಾಗಿ ನಡೆದು ಎಲ್ಲರಿಗೂ ಕಣ್ಣಂಗಳವಾಗಲಿ ಎಂದು ಡಾ || ಮೋದಿಯವರೊಡನೆ ಸಂಭಾಷಿಸುತ್ತಾ ತಿಳಿಸಿದರು.



ತೀರ್ಥಹಳ್ಳಿಯ ಮುದ್ದುಗರ್ ಟಾಕೀಸಿನಲ್ಲಿ ಫೆಬ್ರವರಿ 12 ರಂದು ನಾಗದೇವತಾಚಿತ್ರವನ್ನು 1 ನೇ ತರಗತಿಯಲ್ಲಿ ಕುಳಿತು ನೋಡುತ್ತಿದ್ದ ಶ್ರೀ ಬಿ ನಟರಾಜ್ ಎಂಬಾತನು ವಿಪುಲಳು ಕೈಲಾಸದಲ್ಲಿ ಶಿವನ ಮುಂದೆ ಮಾಡಿದ ನೃತ್ಯ ಸಮಯದಲ್ಲಿ ತಾನೂ ಎದ್ದು ಓಂ ನಮಃ ಶಿವಾಯ ಎಂಬ ಮಂತ್ರದೊಡನೆ ಕಣ್ಣಿಯಲು ಪ್ರಾರಂಭಿಸಿದನೆಂದೂ, ಕರ್ಪೂರ ಹೊತ್ತಿಸಿ ಮಂಗಳಾರತಿ ನಡೆಸಿ ಪ್ರಾರ್ಥನೆ ಸಲ್ಲಿಸಿದ ನಂತರ ಅತ ಸುಮ್ಮನಾದನೆಂದೂ ಎ ವಿ ಎಂ ನ್ಯೂಸ್ ಪ್ರಕಟಿಸಿದೆ ಇದೇ ರೀತಿ ವದಂತಿಯನ್ನು ಸೆಲೆಕ್ಟ್ ಟಾಕೀಸಿನಲ್ಲಿ 22 ನೇ ತಾ॥ ದಿನ ಓದಿ ಹಿಂದೂ ಮಹಿಳೆ ನರ್ತನ ಮಾಡಿದಳೆಂದು ವಂದಿಯಾಗಿದೆ

× ಶ್ರೀ ವಾಸವಿಲಂಕಾ ನಿಧನದ ಬಗ್ಗೆ ಪಾಕಿಸ್ತಾನ ಘಟನಾಸಮಿತಿ ಅಧ್ಯಕ್ಷರು ಸಂತಾಪಸೂಚಿಸಿದ್ದಾರೆ

ಚಿಕ್ಕ ಚಾರಿತ್ರಿಕ ನಾಟಕ—

ಜೆ ೀ ಬು ನ್ನಿ ೀ ಸಾ

(ಮುಂದುವರಿದುದು)

— ೪ —

ಸ್ಥಳ– ಜೇಬುನ್ನಿಸಾ ರಹಸ್ಯಮಂದಿರ. ರಾತ್ರಿ ಭಯಂಕರವಾಗಿದೆ : ಆಕಾಶದಲ್ಲಿ ನಕ್ಷತ್ರಗಳು ಇಲ್ಲಿ ಅಲ್ಲಿ ಮಿಣಕ್ ಮಿಣಕ್ ಅನ್ನುತ್ತಿವೆ ; ಜೇಬುನ್ನೀಸಾ ರಾಜಕುಮಾರಿಯು, ಶೂನ್ಯದೊಳಗೆ ಅಂಧಕಾರದೊಳಗೆ ನಿಟ್ಟುಸುರುಬಿಡುತ್ತಾ ನೋಡುತ್ತಿದ್ದಾಳೆ ; ಯಾರಿಗಾಗಿ ಯೋ ೀ ನಿರೀಕ್ಷಿಸುತ್ತಿರುವಂತೆ ರಾಜಕುಮಾರಿಯ ವಿಶಾಲನೇತ್ರಗಳಿಂದ ಒಂದು ಭಾವವು ಪ್ರಸ್ಫುಟವಾಗುತ್ತಿದೆ ; ಕ್ಷಣಕ್ಷಣಕ್ಕೆ ರಾಜಕುಮಾರಿಯ ಮುಖವರ್ಚಸ್ಸಿನಲ್ಲಿ ಆಶ್ಚರ್ಯಕರಗಳಾದ ಬದಲಾವಣೆಗಳು ಗೋಚರಿಸುತ್ತವೆ, ಒಂದು ಕ್ಷಣ ಕಾಲ ಉಲ್ಲಾಸದಿಂದಿರುತ್ತಾಳೆ, ಮತ್ತೊಂದು ಕ್ಷಣದಲ್ಲಿ ಭಯವಿವ್ವಳಿಯಾಗುತ್ತಾಳೆ ; ಕೂಡಲೇ ನಿರಾಶಾಪೂರಿತ ನೇತ್ರಗಳಿಂದ ಶೂನ್ಯದ ಕಡೆ ನೋಡುತ್ತಾಳೆ : ಯಾವುದೋ ಶಬ್ದವು ಕೇಳಿಬಂದೊಡನೆಯೇ ಮುಖವನ್ನು ವಿಕಸಿತಗೊಳಿಸಿ ನೋಡುತ್ತಾಳೆ ; ಕೂಡಲೇ ಆ ವಿಕಸಿತತೆಯು ಮಾಯವಾಗುತ್ತದೆ..... ..... ಬಾಗಿಲನ್ನು ತಟ್ಟಿದ ಶಬ್ದ : ಬೇಗಹೋಗಿ ಬಾಗಿಲು ತೆಗೆಯುತ್ತಾಳೆ : ರಜಿಯಾ ಪ್ರವೇಶಿಸುತ್ತಾಳೆ ; ಆಕೆಯ ಹಿಂದೆ ಮತ್ತೊಬ್ಬ ಸ್ತ್ರೀ.....

ಜೇಬು— ರಜಿಯಾ, ದಿಲೀಪ್ ಎಲ್ಲಿ ?

ರಜಿಯಾ— ಅಗೋ, ಸ್ತ್ರೀ ವೇಷದಲ್ಲಿ.

[ರಾಜಕುಮಾರ ದಿಲೀಪ್ ಸ್ತ್ರೀ ವೇಷವನ್ನು ತೆಗೆದುಹಾಕುತ್ತಾನೆ, ರಾಜಕುಮಾರಿಯ ಎದುರಿನಲಿ ನಿಲ್ಲುತ್ತಾನೆ : ಏನೂ ಮಾತನಾಡಲಿಲ್ಲ ; ಜೇಬುನ್ನೀಸಾ ತದೇಕ ದೃಷ್ಟಿಯಿಂದ, ರಾಜಕುಮಾರನ ಮುಖವನ್ನೇ ನೋಡುತ್ತಾ ಸ್ತಬ್ಧಳಾಗಿ ನಿಂತುಬಿಡುತ್ತಾಳೆ ; ಸ್ವಲ್ಪ ಹೊತ್ತು ಎಲ್ಲಾ ನಿಶ್ಶಬ್ದ)

ಜೇಬು— (ನಿಶ್ಶಬ್ದವನ್ನು ಚೂರು ಮಾಡುತ್ತಿರುವಂತೆ) ಕ್ಷಮಿಸು ದಿಲೀಪ್ ; ದಿಲೀಪ್.....

ದಿಲೀಪ್— .....

ಜೇಬು— ನನ್ನ ತಂದೆಯು ನಿಮ್ಮ ವಿಷಯದಲ್ಲಿ ಬಹಳ ದ್ರೋಹವನ್ನು ಮಾಡಿದ್ದಾರೆ, ದಿಲೀಪ್ ....

ದಿಲೀಪ್— .....

ಜೇಬು— ಅಬ್ಬಾಜಾನ್ ಪರವಾಗಿ ನಾನು ನಿಮ್ಮ ಕ್ಷಮೆಯನ್ನು ಕೇಳಿಕೊಳ್ಳುತ್ತೇನೆ.

ದಿಲೀಪ್— .....

ಜೇಬು— (ರಜಿಯಾಳನ್ನು ಅಲ್ಲಿಂದ ಹೊರಡಲು ಸಂಜ್ಞೆ ಮಾಡುತ್ತಾಳೆ — ರಜಿಯಾ ಭಯದೊಡನೆ ಹೊರಟುಹೋಗುತ್ತಾಳೆ)

ಜೇಬು— ದಿಲೀಪ್, ನಿಮ್ಮ ವಿಷಯದಲ್ಲಿ ಅಬ್ಬಾಜಾನ್ ಕ್ಷಮಿಸಲಾಗದ ಅಪಕಾರ ಮಾಡಿರುವನೆಂಬುದು ನನಗೆ ಗೊತ್ತು.

ದಿಲೀಪ್— (ಕಠಿಣವಾಗಿ) ಅದು ನಿಮ್ಮ ಸ್ವಭಾವ.

ಜೇಬು— (ರಾಜಕುಮಾರನು ಉತ್ತರವನ್ನು ಕೊಟ್ಟಿದ್ದಕ್ಕಾಗಿ ಉತ್ಸಾಹವನ್ನು ಪ್ರಕಟಿಸುತ್ತಾ) ಸ್ವಭಾವವಲ್ಲ ದಿಲೀಪ್, ತಪ್ಪು ಅರಿವೆಯಿಲ್ಲದೆಮಾಡಿದ್ದು :

ದಿಲೀಪ್— (ಕೋಪದೊಡನೆ) ಖುರಾನಿನ ಹೆಸರಿನಲ್ಲಿ ಮಾಡುತ್ತಿರುವ ದುರ್ಮಾರ್ಗಗಳು, ಮಾನವಹಿಂಸೆ ತಿಳಿಯದೇ ಮಾಡಿದ ತಪ್ಪೇ ? ಅದರಲ್ಲಿ ದುರಹಂಕಾರ, ಅಧಿಕಾರ ಗರ್ವ, ಮತವಿದ್ವೇಷ ಏನೂ ಇಲ್ಲವೇ ?

ಜೇಬು— (ಮಂದಹಾಸದೊಡನೆ) ಪವಿತ್ರ ಖುರಾನನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವುದು ಅರಿವೆಯಿಲ್ಲದಿರುವುದರಿಂದಲೇ : ಇದರಿಂದಲೇ ಈ ತಪ್ಪು ತಿಳುವಳಿಕೆಯಿಂದಲೇ ಇತರ ಮತಸ್ಥರಿಗೆ ಅನ್ಯಾಯವು ನಡೆಯುತ್ತಿದೆ.

[ಸಶೇಷ]

Edited, Printed & Published by Dharma Prachara Nirata M. S Krishna Rao, at the Satyavadi Press, Chamrajpura, Mysor

ವುಡ್‌ಲ್ಯಾಂಡ್ಸ್ ಆಮೋಘ 2 ನೇ ವಾರ

ಅಲ್‌ಬೇಲಿ (ಹಿಂದಿ)

ಪಾತ್ರ— ಗೀತಾಬಾಲಿ, ಪ್ರದೀಪಕುಮಾರ್, ಜಾನಿವಾಕರ್, ಓಂಪ್ರಕಾಶ್

ಪ್ರತಿಯೊಬ್ಬರೂ ನೋಡಿ ಆನಂದಿಸಬೇಕಾದ ಚಿತ್ರಾತಿಶಯ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನ

ನ್ಯೂ ಅಪೆರಾ

ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸಲಾಗುತ್ತಿದೆ

ಕೀರ್ತಿಯುತ 9 ನೇ ವಾರ **ಆದರ್ಶ ಸತಿ**

ಪಾತ್ರ : ಆರ್. ನಾಗೇಂದ್ರರಾವ್, ಜಮುನ, ಜಾನಕಿ, ಮಾಲತಿ, ಮೋಹನ

ಮಹೋನ್ನತ ಕನ್ನಡ ಚಿತ್ರ [ದಿನ 3 ಆಟಗಳು]

ಎಲ್ಲಾ ವಿಧವಾದ ಆಯುರ್ವೇದ ಔಷಧಿಗಳಿಗೂ

ಅಶೋಕ ಫಾರ್ಮಸಿ

ಎಂ.ಜಿ.ರೋಡ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

ರಣಜಿತ್

ಈ ದಿವಸ

ಟಿಕ್ ಸಾಲ್ (ಹಿಂದಿ)

ಶಕ್ತಿಸುದಾ

— ಉತ್ತಮ ಟಾನಿಕ್ —

ರಾಜಘಾಟಿನ ಸಾಮಾನ್ಯ ದೃಶ್ಯ : ಇಟ್ಟಿಗೆಗಳಿಂದ ನಿರ್ಮಿಸಿರುವ ಪಥವು ಎತ್ತರಿಸಿದ ಭೂವಿಭಾಗವೇ ಅರಮನೆಗೆ ಒಯ್ಯುತ್ತಿರುವುದು